ಪಾವತಿ ಬಿಲ್ಲುಗಳನ್ನು 2012–13ನೇ ಸಲಿನಲ್ಲಿ ₹ 63,53,564/– ಮೌಲ್ಯದ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳನ್ನು ತಿರುವಳಿ ಮಾಡಲಾಗಿರುತ್ತದೆ. 2013–14ನೇ ಸಾಲಿನಲ್ಲಿ ಒಟ್ಟಾರೆ ₹69,12,544–00 ಮೌಲ್ಯದ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ.

ಮುಂದುವರೆದು, ವಿಮಾದಾರರ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲುಗಳು ಕಳೆದ 06 ತಿಂಗಳಿಂದ ತಿರುವಳಿಗಾಗಿ ಬಾಕಿ ಇರುವ ವಿಷಯ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಪ್ರಮುಖವಾಗಿ ಈ ಜಿಲ್ಲೆಯಲ್ಲಿನ ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯಗಳಲ್ಲಿ ಲಿಪಿಕ ಮತ್ತು ಫಾರ್ಮಸಿಸ್ಟ್ ವೃಂದದ ಹುದ್ದೆಗಳು ಖಾಲಿ ಇರುವುದರಿಂದ ವಿಮಾದಾರರ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳನ್ನು ತಿರುವಳಿ ಮಾಡಲು ವಿಳಂಬವಾಗಿರುತ್ತದೆ. ಇವುಗಳನ್ನು ವಿಲೇವಾರಿ ಮಾಡಲು ಅಗತ್ಯವಿರುವ ಸಿಬ್ಬಂದಿಗಳನ್ನು ಶೀಘ್ರವಾಗಿ ನಿಯೋಜಿಸಿ ಬಾಕಿ ಇರುವ ಎಲ್ಲಾ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲುಗಳನ್ನು ತಿರುವಳಿ ಮಾಡಲಾಗುವುದು.

viii) ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನೀರು ಪೂರೈಕೆ ಯೋಜನೆಗಳಿಗಾಗಿ ಕೇಂದ್ರದಿಂದ ಬಿಡುಗಡೆಯಾದ ಅನುದಾನದಲ್ಲಿ ಭಾಗಶಃ ಅನುದಾನವನ್ನು ಉತ್ತರ ಕನ್ನಡ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ವರ್ಗಾಯಿಸಿರುವ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ): ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ನೀರು ಪೂರೈಕೆ ಯೋಜನೆಗಳಿಗಾಗಿ ಕೇಂದ್ರದಿಂದ ಬಿಡುಗಡೆಯಾದ ಅನುದಾನದಲ್ಲಿ ಭಾಗಶಃ ಅನುದಾನವನ್ನು ಉತ್ತರ ಕನ್ನಡ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ವರ್ಗಾಯಿಸಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):

ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನೀರು ಪೂರೈಕೆ ಯೋಜನೆಗಳಿಗಾಗಿ ಕೇಂದ್ರದಿಂದ ಬಿಡುಗಡೆಯಾದ ಅನುದಾನದಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ 23.01.2014 ರಂದು 10.00 ಕೋಟಿ ಮತ್ತು 29.03.2014ರಂದು 6 ಕೋಟಿ ರೂಪಾಯಿಗಳ ಅನುದಾನದನ್ನು ಬೇರೆ ಜಿಲ್ಲೆಗೆ ವರ್ಗಾಯಿಸಿರುವುದರಿಂದ ಜಿಲ್ಲೆಯ ಅನೇಕ ಕಾಮಗಾರಿಗಳ ಬಿಲ್ಲು ಪಾವತಿಸಲಾಗದೆ ತೊಂದರೆ ಅನುಭವಿಸುವಂತಾಗಿದ್ದು, ಈಗ ನಡೆಯುವ ಕಾಮಗಾರಿಗಳನ್ನು ಮುಂದಿನ ಯೋಜನೆಗಳಿಗಾಗಿ ಪರಿಗಣಿಸಿದ್ದರಿಂದ 2014–15ನೇ ಸಾಲಿನ ಅನುದನವು ಹಳೆಯ ಕಾಮಗಾರಿಗಳ ಬಿಲ್ಲಿಗೆ ಬಟವಡೆ ಆಗುವುದರಿಂದ ಹೊಸ ಕಾಮಗಾರಿಗಳಿಗೆ ಅನುದನವು ದೊರೆಯದಂತಾಗಿದ್ದು, ಉತ್ತರ ಕನ್ನಡ ಜಿಲ್ಲೆಗೆ ಬಿಡುಗಡೆಯಾದ ಅನುದಾನವನ್ನು ಯಾವ ಜಿಲ್ಲೆಗೆ ವರ್ಗಾಯಿಸಲಾಗಿದೆ. ಹಾಗೂ ಸದರಿ ಹಣವನ್ನು ಉತ್ತರ ಕನ್ನಡ ಜಿಲ್ಲೆಗೆ ವರ್ಗಾಯಿಸುವ ಬಗ್ಗೆ.

ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, 2013–14ರ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿಗೆ ಗ್ರಾಮೀಣ ಕುಡಿಯುವ ನೀರಿನ ಬಾಬ್ತಿಗಾಗಿ ₹3036.60 ಲಕ್ಷ ಹಂಚಿಕೆ ಮಾಡಲಾಗಿತ್ತು. ಆದರೆ ರಾಜ್ಯ ಹಾಗೂ ಕೇಂದ್ರ ವಲಯಗಳೂ ಆರಂಭಿಕ ಶಿಲ್ಕು ಸೇರಿ ಒಟ್ಟಾರೆ ₹4089.58 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಪೈಕಿ ₹3497.50 ಲಕ್ಷ ಮಾತ್ರ ವೆಚ್ಚ ಭರಿಸಿರುವುದಾಗಿ ವರದಿಯಾಗಿದೆ. ಜನವರಿ ಮತ್ತು ಮಾರ್ಚ 2014ರಲ್ಲಿ ವೆಚ್ಚ ಭರಿಸದೆ ಹೆಚ್ಚಿನ ಅನುದಾನ ಉಳಿಸಿಕೊಂಡಿರುವುದರಿಂದ ದಿನಾಂಕ: 23.01.2014 ಮತ್ತು ದಿನಾಂಕ: 29.03.2014 ರಲ್ಲಿ ₹16.00 ಕೋಟಿ ಅನುದಾನದ ಆಂತರಿಕ

ಬದಲಾವಣೆ ಮಾಡಿಕೊಂಡು ಬೇರೆ ಜಿಲ್ಲೆಗಳಲ್ಲಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುದಾನ ವರ್ಗಾಯಿಸಿ ವೆಚ್ಚ ಭರಿಸಲಾಗಿದೆ. ಆದರೆ ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿಯಲ್ಲಿನ ಕಾಮಗಾರಿಗಳಿಗೆ ಬಿಲ್ ಪಾವತಿಗೆ ಯಾವುದೇ ತೊಂದರೆಯಾಗಿರುವುದಿಲ್ಲ. ವಾಸ್ತವಿಕ ಅಗತ್ಯತೆ ಮತ್ತು ಪ್ರಗತಿ ಆಧರಿಸಿ NRDWP ಮಾರ್ಗಸೂಚಿಗಳನ್ವಯ ಅನುದಾನದ ಹಂಚಿಕೆಯಾಗುತ್ತದೆ. 2014–15ರ ಆರ್ಥಿಕ ಸಾಲಿನಲ್ಲಿ ₹ 2925.00 ಲಕ್ಷ ಅಂದಾಜಿನ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಲು ಜಿಲ್ಲಾ ಪಂಚಾಯತ್‌ಗೆ ಸೂಚಿಸಲಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಜನವರಿ ಮತ್ತು ಮಾರ್ಚ್‌ನಲ್ಲಿ ನಮ್ಮ ಕೇಂದ್ರ ಸರ್ಕಾರದಿಂದ ಜಿಲ್ಲಾಪಂಚಾಯತ್ ಕುಡಿಯುವ ನೀರಿನ ಯೋಜನೆಗೆ ನಮ್ಮ ಜಿಲ್ಲೆಗೆ ಮಂಜೂರಾದಂತಹ ಹಣದಲ್ಲಿ 10 ಕೋಟಿ ಮತ್ತು 6 ಕೋಟಿ ರೂಪಾಯಿ, ಒಟ್ಟು 16 ಕೋಟಿ ರೂಪಾಯಿ ಬೇರೆ ಜಿಲ್ಲೆಗೆ ಡೈವರ್ಟ ಆಯಿತು. ಅದರಿಂದಾಗಿ ಈಗ payment ಗೆ problem ಆಗಿದೆ. ಇದು ಒಂದು ವಿಚಾರ. ಎರಡನೆಯದು, ಈ ವರ್ಷದ ಟಾರ್ಗೆಟ್‌ನ್ನು ಸಹ ಈಗ ಕೊಟ್ಟಿದ್ದಾರೆ, ಅದು ಕಡಿಮೆಯಾಗಿದೆ. ಏಕೆಂದರೆ ಆ 16 ಕೋಟಿ ರೂಪಾಯಿ ಡೈವರ್ಟ ಆಗಿರುವುದರಿಂದ ಈ ವರ್ಷದ ಟಾರ್ಗೆಟ್ ಕಡಿಮೆಯಾಯಿತು. ಇದರಿಂದ ನಮ್ಮ ಜಿಲ್ಲೆಯಲ್ಲಿ ಹೊಸ ಕುಡಿಯುವ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಹಾಗಾಗಿ ಹೆಚ್ಚಿನ ಅನುದಾನ ತಕ್ಷಣ ಬಿಡುಗಡೆ ಮಾಡಬೇಕು. ಈಗ ಡೈವರ್ಟ ಆಗಿರುವ 16 ಕೋಟಿ ರೂಪಾಯಿ ಹಣ ಬಿಲ್ ಪೇಮೆಂಟ್‌ಗೆ ತಕ್ಷಣ ಕೊಡಿಸುವಂತೆ ಸೂಚನೆ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತಂದು ಇದಕ್ಕೆ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಅವರಿಂದ ಸೂಕ್ತವಾದಂತಹ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ವರ್ಷದ ಕ್ರಿಯಾಯೋಜನೆಗೆ ಕುಡಿಯುವ ನೀರಿಗೆ ಹಣ ಕಡಿಮೆಯಾಗಬಾರದು.

ಅಧ್ಯಕ್ಷರು: ಈ ಸಲ ಎಲ್ಲಾ ಜಿಲ್ಲೆಗೂ ಅದೇ ರೀತಿಯಾಗಿದೆ. ನಮ್ಮ ಜಿಲ್ಲೆಗೂ ಅದೇ ರೀತಿ ಆಗಿದೆ. ಹೋದಸಲ 80 ಕೋಟಿ ರೂಪಾಯಿ ಕೊಟ್ಟಿದ್ದರು, ಆದರೆ ಈ ಬಾರಿ ಕೇವಲ 30 ಕೋಟಿ ರೂಪಾಯಿ ಕೊಟ್ಟಿದ್ದಾರೆ.

ix) ವಿಷಯ: ಶಿವಮೊಗ್ಗ ನಗರದ ಪುರಾತನ ದೇವಸ್ಥಾನವಾದ ಶ್ರೀ ಕೋಟೆ ಆಂಜನೇಯ ದೇವಸ್ಥಾನದಲ್ಲಿ ಪಾಕ ಶಾಲೆಯನ್ನು ಹೊಸದಾಗಿ ಕಟ್ಟಲು ಪ್ರಾಚ್ಯ ವಸ್ತು ಸಂಗ್ರಹದ ಇಲಾಖೆಯ ಅಧಿಕಾರಿಗಳು ಬಿಡದಿರುವ ಬಗ್ಗೆ.

ಶ್ರೀ ಕೆ. ಬಿ. ಪ್ರಸನ್ನ ಕುಮಾರ್ (ಶಿವಮೊಗ್ಗ): ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನೀರು ಪೂರೈಕೆ ಯೋಜನೆ ಗಳಿಗಾಗಿ ಕೇಂದ್ರದಿಂದ ಬಿಡುಗಡೆಯಾದ ಅನುದಾನದಲ್ಲಿ ಭಾಗಶಃ ಅನುದಾನ ವನ್ನು ಉತ್ತರ ಕನ್ನಡ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ವರ್ಗಾಯಿಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರದ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಾಲಯವು ಧಾರ್ಮಿಕ ದತ್ತ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸಮೂಹ 'ಬಿ' ವರ್ಗದ ಅಧಿಸೂಚಿತ ದೇವಾಲಯವಾಗಿರುತ್ತದೆ. ಈ ದೇವಾಲಯವು ರಜ್ಯ ಪುರಾತತ್ವ ಮತ್ತು ಪ್ರಾಚ್ಯವಸ್ತು ಇಲಾಖೆ ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿ ಸೇರಿರುವ ರಾಜ್ಯ ಸಂರಕ್ಷಿತ ದೇವಾಲಯವಾಗಿರುವುದರಿಂದ ಯಾವುದೇ ದುರಸ್ಥಿ ಹಾಗೂ ಕಟ್ಟಡಗಳನ್ನು ನಿರ್ಮಾಣ ಮಾಡಬೇಕಾಗಿದ್ದಲ್ಲಿ ಸದರಿ ಇಲಾಖೆಯಿಂದ ಪೂರ್ವಾನುಮತಿಯನ್ನು ಪಡೆಯಬೇಕಾಗಿರುತ್ತದೆ.